# ನಾಯಕರಲ್ಲದ ನಾಯಕರು

ತಲೆಗೆ ಸುತ್ತಿದ್ದ ಬಿಳಿಬಟ್ಟೆಯನ್ನೊಮ್ಮೆ ನೇವರಿಸಿ ವಿಷ್ಣು ಸುದ್ದಿಮಿತ್ರರನ್ನು ಆ ದಿನ ದುರುಗುಟ್ಟಿದ್ದರು. ಹೊಗೇನಕಲ್ ವಿವಾದ ಉದ್ಭವಿಸಿದ್ದ ಸಂದರ್ಭ ಅದು. ಆಗ ಬೆಂಗಳೂರಿನ ಪುರಭವನದೆದುರು ನಡೆದ ಪ್ರತಿಭಟನೆಯಲ್ಲಿ ವಿಷ್ಣುವರ್ಧನ್ ಇರಲಿಲ್ಲ. ಆಗ ಅವರು ಮಡಿಕೇರಿಯಲ್ಲಿದ್ದರು. ಕನ್ನಡ ಚಿತ್ರರಂಗದ ನಾಯಕ ಯಾರೆಂಬ ಪ್ರಶ್ನೆ ಎದ್ದ ಕ್ಷಣವದು. ಆ ಪ್ರಶ್ನೆ ಸುದ್ದಿಮಿತ್ರರಿಂದ ನೇರ ಬಂದಾಗ ವಿಷ್ಣು ಹಾಗೆ ದುರುಗುಟ್ಟಿದ್ದು. 'ಐ ಆ್ಯಮ್ ನಾಟ್ ಲೀಡರ್. ನಾನೇ ಯಾಕಾಗಬೇಕು?' ಎನ್ನುತ್ತಾ ಕೈಕೊಡವಿಕೊಂಡು ಅವರು ಹೊರಟೇಬಿಟ್ಟರು.

ರಾಜ್‌ಕುಮಾರ್ ಇಲ್ಲವಾದ ಮೇಲೆ ವಿಷ್ಣುವರ್ಧನ್ ಕನ್ನಡ ಚಿತ್ರರಂಗದ ನಾಯಕರಾಗುತ್ತಾರಾ ಎಂಬ ಪ್ರಶ್ನೆ ಇತ್ತು. ಆದರೆ, ಅವರು ಆ ಕುರ್ಚಿಯ ಹತ್ತಿರವೂ ಸುಳಿದಾಡಲಿಲ್ಲ. ತಮ್ಮ ನಾಯಕ ಯಾರೆಂದು ಜನರೇ ತೀರ್ಮಾನಿಸಿಕೊಳ್ಳುತ್ತಾರೆ ಎಂದ ಅವರು ಸಮಾಜದ ಉಸಾಬರಿ ತಮ್ಮದಲ್ಲವೇ ಅಲ್ಲ ಎಂದು ಹೇಳಿಬಿಟ್ಟಿದ್ದರು.

ಈಗ ವಿಷ್ಣುವರ್ಧನ್ ಇಲ್ಲ. ಚಿತ್ರರಂಗ ಇದೆ. ಸಮಸ್ಯೆಗಳು ಉಳಿದಿವೆ. ಕೆಲವು ಬೆಳೆಯುತ್ತಲೂ ಇವೆ. ಚಿತ್ರರಂಗದ ನಟ–ನಟಿಯರ ಪಟ್ಟಿಯೂ ಉದ್ದವಾಗಿದೆ. ಕನ್ನಡ ಬರುವವರು, ಬಾರದವರು, ಅವಕಾಶಕ್ಕಾಗಿ ಚಾತಕ ಪಕ್ಷಿಗಳಾದವರು, ವಯಸ್ಸಾದ ಕಾರಣಕ್ಕೆ ಅವಕಾಶ ಕಡಿಮೆಯಾದವರು, ಒಂದು ಕಾಲದ ಆಕರ್ಷಣೆ ಎನ್ನಿಸಿದ್ದವರು, ಈ ಕಾಲ ತಮ್ಮನ್ನು ಮರೆಯುತ್ತಿದೆಯಲ್ಲ ಎಂದು ಗೊಣಗಾಡುವವರು– ಎಲ್ಲರೂ ಇಲ್ಲಿದ್ದಾರೆ. ಅಂಥವರೆಲ್ಲಾ ಆಗಾಗ ಒಂದಾಗುತ್ತಾರೆ. ಮೊನ್ನೆ ತೆರಿಗೆ ಹೆಚ್ಚಿಸಿದರೆ ಉದ್ಯಮಕ್ಕೆ ಒಳಿತಾಗುವುದಿಲ್ಲ ಎಂದು ಚಿತ್ರೋದ್ಯಮ ಪ್ರತಿಭಟನೆ ನಡೆಸಿತು. ಅಲ್ಲಿ ಮತ್ತೆ ಎದ್ದುಕಂಡದ್ದು ನಾಯಕತ್ವದ ಕೊರತೆ. ರಾಜ್‌ಕುಮಾರ್ ಕುಟುಂಬದ ಮೂವರೂ ಮಕ್ಕಳು ಅಲ್ಲಿದ್ದರು. ಪುನೀತ್ ಮಾತಿಗೆ ಕಿವಿಗೊಡಲು ರವಿಚಂದ್ರನ್ ಜೊತೆಗಿದ್ದರು. ಕೂಲಿಂಗ್ ಗ್ಲಾಸ್ ಹಾಕಿದ್ದ ಸುದೀಪ್ ತಮ್ಮದೇ ಒಂದು ಟ್ರೂಪು ಎನ್ನುವಂತೆ ಒಂದಿಷ್ಟು ಒಡನಾಡಿಗಳನ್ನು ಜೊತೆ ನಿಲ್ಲಿಸಿಕೊಂಡಿದ್ದರು. ದರ್ಶನ್ ಅಲ್ಲಿರಲಿಲ್ಲ. ಗೋಲ್ಡನ್ ಸ್ಟಾರ್ ಎಂಬ ಬಿರುದು ಲೇವಡಿಗೆ ಈಡಾಗುತ್ತಿರುವ ಈ ಹೊತ್ತಲ್ಲಿ ಗಣೇಶ್ ಕೂಡ ಕಾಣಲಿಲ್ಲ. ದಿಢೀರನೆ ಸಂಭಾವನೆ ಏರಿಸಿಕೊಂಡ ಯುವನಟ ಯಶ್ ಟೀವಿಯಲ್ಲಿ ಓಡಾಡಿಕೊಂಡಿದ್ದರು. ದುನಿಯಾ ವಿಜಯ್ ಕೂಡ ನಾಪತ್ತೆ. ಎಲ್ಲಕ್ಕೂ ಮಿಗಿಲಾಗಿ ಅಂಬರೀಷ್ ಎಲ್ಲಿ ಹೋಗಿದ್ದರೋ? ಕೆಲವರು ಅವರು ಬಂದಿದ್ದರು ಎಂದರು. ಇನ್ನು ಕೆಲವರು 'ಹೌದೇ' ಎಂಬ ಪ್ರಶ್ನೆ ಮುಂದಿಟ್ಟರು. ನಟ–ನಟಿಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿದ್ದವರು ನಿರ್ಮಾಪಕರು. ನಿರ್ದೇಶಕರು ಕೂಡ ಪ್ರತಿಭಟನೆ ಆ ಉಸಾಬರಿಗೆ (?) ಹೋಗಿರಲಿಲ್ಲ.

ಈಗ ರಾಜ್‌ಕುಮಾರ್ ಇಲ್ಲ. ವಿಷ್ಣುವರ್ಧನ್ ಇಲ್ಲ. ರವಿಚಂದ್ರನ್ ಇದ್ದರೂ ಅವರು ನಾಯಕರಾಗುವ ಲಕ್ಷಣವಿಲ್ಲ. ಶಿವರಾಜ್‌ಕುಮಾರ್ ಚಿತ್ರಗಳು ಸೋತುಸುಣ್ಣವಾಗುತ್ತಾ ಅವರೂ ನಾಯಕನ ಗಾದಿಗೆ ಹೊಂದುವ ಲಕ್ಷಣ ಕ್ಷೀಣಿಸಿದೆ. ಸೆಲೆಬ್ರಿಟಿ ಕ್ರಿಕೆಟ್ ನೋಡಲು ಇರುವ ಉತ್ಸಾಹ ಅಂಬರೀಷ್‌ಗೆ ಬೀದಿಗಿಳಿದು ಪ್ರತಿಭಟನೆ ಮಾಡುವ ವಿಷಯದಲ್ಲಿ ಇಲ್ಲ. ರಾಜಿ ಪಂಚಾಯಿತಿಯಾದಾಗ ಸಂಧಾನಕ್ಕೆ ಬರಲು ಮಾತ್ರ ಅವರು ಸದಾ ನಾಮುಂದು ಎನ್ನುತ್ತಾರೆ. ಅವರ ಬಗ್ಗೆ ಉದ್ಯಮಕ್ಕೂ ಒಂದು ಮಟ್ಟಕ್ಕೆ ಗೌರವ ಉಳಿದೇ ಇದೆ.

ಕನ್ನಡ ಚಿತ್ರರಂಗಕ್ಕೆ 75 ವರ್ಷ ತುಂಬಿದಾಗ ಚಿತ್ರೋದ್ಯಮದಲ್ಲಿನ ಒಗ್ಗಟ್ಟಿನಲ್ಲಿ ಬಲಕಟ್ಟಿಲ್ಲವೆಂಬುದು ಸಾಬೀತಾಗಿತ್ತು. ಆಗೀಗ ನಡೆಯುವ ಪ್ರತಿಭಟನೆಗಳು ಅದಕ್ಕೆ ಮತ್ತೆಮತ್ತೆ ಕನ್ನಡಿ ಹಿಡಿಯುತ್ತಿವೆ. ಈಗಲೂ ಕಾಡುತ್ತಿರುವುದು ಒಬ್ಬ ರಾಜ್‌ಕುಮಾರ್ ಕೊರತೆ!

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68